ಅಸಲು ದಾವಾ ಸಂಖ್ಯೆ: 603/2020

**ಡಿ.ಡಬ್ಲ್ಯೂ-1**

**ದಿಃ 02–07–2026 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು: ವಾದಿ ಪರ ಶ್ರೀ KVM ವಕೀಲರಿಂದಃ**

5. 4ನೇ ಪ್ರತಿವಾದಿಯು ಸವದತ್ತಿಯ ರೇಣುಕಾ ಸಕ್ಕರೆ ಕಾರ್ಖಾನೆಯಲ್ಲಿ ಎಲೆಕ್ಟ್ರಿಶಿಯನ್ ಆಗಿ ಕೆಲಸ ಮಾಡುತ್ತಿದ್ದಾರೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಸೋಲಾರ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದಾರೆ ಎಂದು ನುಡಿಯುತ್ತಾರೆ. 5 ಹಾಗೂ 8 ನೇ ಪ್ರತಿವಾದಿಯರು ಕೆ.ಎಲ್.ಇ. ಆಸ್ಪತ್ರೆಯಲ್ಲಿ ಎಲೆಕ್ಟ್ರಿಕಲ್ ಕೆಲಸ ಮಾಡುತ್ತಿದ್ದಾರೆ ಎಂದರೆ ಸರಿ. 6ನೇ ಹಾಗೂ 7ನೇ ಪ್ರತಿವಾದಿಯರು ಮೃತ 2ನೇ ಪ್ರತಿವಾದಿಯ ಮಕ್ಕಳು ಹಾಗೂ ಮದುವೆಯ ನಂತರ ತಮ್ಮ ತಮ್ಮ ಗಂಡಂದಿರ ಮನೆಯಲ್ಲಿ ವಾಸಿಸುತ್ತಿದ್ದಾರೆ ಎಂದರೆ ಸರಿ. ಸದರಿಯವರ ಮದುವೆ 2003 ನೇ ಇಸ್ವಿಯ ಮೊದಲು ಆಗಿರುತ್ತದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನಾನು ಆಗ ಸಣ್ಣ ವಯಸ್ಸಿನವನಾಗಿದ್ದೆ ಎಂದು ನುಡಿಯುತ್ತಾರೆ. ನಾನು ಮಿಲಿಟರಿಯಲ್ಲಿ ಕೆಲಸ ಮಾಡುತ್ತಿದ್ದು, ದಿಃ17.04.2000 ರಂದು ಕೆಲಸಕ್ಕೆ ಸೇರಿರುತ್ತೇನೆ. ನಾನು 2003 ನೇ ಇಸ್ವಿಯಲ್ಲಿ ಪಂಜಾಬ್ ರಾಜ್ಯದ ಅಂಬಾಲಾ ಕ್ಯಾಂಟ್ ನಲ್ಲಿ ಕೆಲಸ ಮಾಡುತ್ತಿದ್ದೆ. ಅದರ ಮೊದಲು ನಾನು ನಾಸಿಕ್ ದಲ್ಲಿ ಕೆಲಸ ಮಾಡುತ್ತಿದ್ದೆ. ನನಗೆ ನಾಸಿಕ್ ನಿಂದ ಅಂಬಾಲಾಕ್ಕೆ ದಿಃ29.12.2002 ರಂದು ವರ್ಗಾವಣೆ ಆಗಿರುತ್ತದೆ. ನಾನು ಮಾರ್ಚ್ 2006 ರ ವರೆಗೆ ಅಂಬಾಲಾದಲ್ಲಿ ಕರ್ತವ್ಯ ನಿರ್ವಹಿಸಿದ್ದೇನೆ. ಹಾಗಾದರೆ ಜನವರಿ 2003 ರಿಂದ ಜುಲೈ 2003 ರ ವರೆಗೆ ನಾನು ಅಂಬಾಲಾದಲ್ಲಿ ಕೆಲಸ ಮಾಡುತ್ತಿದ್ದೆ ಎಂದರೆ ಸರಿ. ನಾನು ಅಕ್ಟೋಬರ್ 2003 ರಲ್ಲಿ ಎರಡು ತಿಂಗಳ ರಜೆಯಲ್ಲಿ ಬೆಳಗಾವಿಗೆ ಬಂದಿರುತ್ತೇನೆ.

6. ನಾನು ಈ ದಾವೆಯಲ್ಲಿ ಹಾಜರು ಪಡಿಸಿದ ದಾಖಲೆಗಳನ್ನು ನೋಡಿರುತ್ತೇನೆ. ಸಾಕ್ಷಿಗೆ ನಿಪಿಃ16 ದಾಖಲೆಯನ್ನು ತೋರಿಸಿದ್ದು, ಅದು ರಾಜಿ ಡಿಕ್ರಿ ಆಗಿದ್ದು, ಅದು ಸರಿ ಇರುತ್ತದೆ ಎಂದರೆ ಸರಿ. ನಿಪಿಃ17 ರಾಜಿ ಅರ್ಜಿ ಪ್ರಕಾರ, ನಿಪಿಃ16 ರಾಜಿ ಡಿಕ್ರಿ ಮಾಡಲಾಗಿರುತ್ತದೆ ಎಂದರೆ ಸರಿ. ನಿಪಿಃ17 ರಲ್ಲಿ ಬರೆದಿರುವ ಅಂಶಗಳು ಸರಿ ಇರುತ್ತವೆ. ಮೃತ 2ನೇ ಪ್ರತಿವಾದಿಗೆ ಕಲಗೌಡ ಎನ್ನುವ ಇನ್ನೊಬ್ಬ ಮಗ ಇದ್ದು, ಸದರಿಯವರು ದಿಃ25.05.2016 ರಂದು ಮೃತಪಟ್ಟಿರುತ್ತಾರೆ. ಸದರಿಯವರ ವಾರಸುದಾರರಾಗಿ ಅವರ ಹೆಂಡತಿ ಜಯಶ್ರೀ ಹಾಗೂ ವಿಕಾಸ ಮತ್ತು ವಿಜಯ ಮಕ್ಕಳು ಇದ್ದಾರೆ ಎಂದರೆ ಸರಿ. ಅಸಲು ದಾವಾ ಸಂಖ್ಯೆ 781/2018 ನ್ನು ದಾಖಲಿಸುವಾಗ ಸದರಿ ವಿಕಾಸ ಮತ್ತು ವಿಜಯ ರವರು ಸಣ್ಣ ವಯಸ್ಸಿನವರಾಗಿದ್ದರು ಎಂದರೆ ಸರಿ. ಸದರಿಯವರು ಸಣ್ಣವರಾಗಿದ್ದರಿಂದ ಸದರಿ ದಾವೆಯನ್ನು ಅವಳ ತಾಯಿ ಜಯಶ್ರೀ ರವರು ನಡೆಸುತ್ತಿದ್ದರು ಎಂದರೆ ಸರಿ. ನಿಪಿಃ17 ರಂತೆ ಅಸಲು ದಾವಾ ಸಂಖ್ಯೆ 781/2018 ರಲ್ಲಿರುವ 3ನೇ ವಾದಿಯು ಪ್ರಸ್ತುತ ದಾವೆಯಲ್ಲಿನ 4 ಮತ್ತು 5ನೇ ಪ್ರತಿವಾದಿಗೆ ತಮಗೆ ಸೇರಿದ ಹಕ್ಕನ್ನು ಬಿಟ್ಟುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಅಸಲು ದಾವಾ ಸಂಖ್ಯೆ 781/2018 ರಲ್ಲಿರುವ 10ನೇ ಪ್ರತಿವಾದಿಯಾದ ನನ್ನ ತಂಗಿ ಪ್ರಸ್ತುತ ದಾವೆಯಲ್ಲಿನ 8 ಹಾಗೂ 9ನೇ ಪ್ರತಿವಾದಿಗೆ ತಮಗೆ ಸೇರಿದ ಹಕ್ಕನ್ನು ಬಿಟ್ಟುಕೊಟ್ಟಿರುತ್ತಾರೆ ಎಂದರೆ ಸರಿ. ಆ ರೀತಿಯಾಗಿ ಕಲಗೌಡ ರವರ ಹೆಂಡತಿ ಜಯಶ್ರೀ ಹಾಗೂ ನನ್ನ ತಂಗಿ ಸುಗಂದಾ ರವರು ತಮಗೆ ಸೇರಿದ ಹಕ್ಕುಗಳನ್ನು ಬಿಟ್ಟುಕೊಟ್ಟಿದ್ದ ಕಾರಣ, ಸದರಿಯವರಿಗೆ ಈ ದಾವೆಯ ದಾವಾ ಸ್ವತ್ತಿಗೆ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿ.

7. 2003 ನೇ ಇಸ್ವಿಯಲ್ಲಿ ನಮ್ಮ ಮನೆತನಕ್ಕೆ ಒಟ್ಟು ಎರಡು ಮನೆಗಳು ಹಾಗೂ 7– ಎಕರೆ ವಿಸ್ತೀರ್ಣದ ಹೊಲಗಳು ಇದ್ದವು. ಸದರಿ ಹೊಲಗಳು ಬಾಳೇಕುಂದ್ರಿ ಗ್ರಾಮದ ಸರ್ವೆ ನಂ.358, 121, 139, 162, 79, 74 ರಲ್ಲಿ ಇತ್ತು. ಸದರಿ ಎಲ್ಲ ಜಮೀನುಗಳ ಒಟ್ಟು

ವಿಸ್ತೀರ್ಣ 7–ಎಕರೆ ಆಗಿತ್ತು. ಸದರಿ ಮನೆಗಳು ಬಾಳೇಕುಂದ್ರಿಯಲ್ಲಿ ಇದ್ದು, ಅವುಗಳ ನಂ.122, 123 ಆಗಿರುತ್ತದೆ. ಸದರಿ ಆಸ್ತಿಗಳು 2018 ನೇ ಇಸ್ವಿಯವರೆಗೂ ನಮ್ಮ ಹೆಸರಿನಲ್ಲಿ ಇತ್ತು ಎಂದರೆ ಸಾಕ್ಷಿಯು ಈವರೆಗೂ ಅದು ನಮ್ಮ ಹೆಸರಿನಲ್ಲಿ ಇರುತ್ತದೆ ಎಂದು ನುಡಿಯುತ್ತಾರೆ. ವಿಭಾಗ ಕೋರಿ ಸಲ್ಲಿಸಿದ ಅಸಲು ದಾವಾ ಸಂಖ್ಯೆ 781/2018 ರಲ್ಲಿ ಈ ದಾವೆಯ ದಾವಾ ಸ್ವತ್ತನ್ನು ಸೇರಿಸಿರುವುದಿಲ್ಲ ಎಂದರೆ ಸರಿ. ಈ ದಾವೆಯ ದಾವಾ ಸ್ವತ್ತನ್ನು ಹೊರತು ಪಡಿಸಿ ವಿಭಾಗ ಕೇಳಿರುವ ಬೇರೆ ಸ್ವತ್ತುಗಳ ಬಗ್ಗೆ ದಾಖಲೆಗಳು ನನ್ನ ಬಳಿ ಇರುತ್ತವೆ. ಸದರಿ ದಾಖಲೆಗಳನ್ನು ನನಗೆ ನ್ಯಾಯಾಲಯಕ್ಕೆ ಹಾಜರು ಪಡಿಸಲು ಯಾವುದೇ ತೊಂದರೆ ಇರುವುದಿಲ್ಲ.

8. ನಿಪಿಃ17 ರಲ್ಲಿರುವ 4 ನೇ ಪ್ರತಿವಾದಿಯಾದ ಸುಭಾಶ ಗೌಡಪ್ಪ ಪಾಟೀಲ ಹಾಗೂ 8ನೇ ಪ್ರತಿವಾದಿಯಾದ ಶಂಕರಗೌಡ ಅಣ್ಣಪ್ಪ ಪಾಟೀಲ ರವರ ಸಹಿಗಳನ್ನು ಸಾಕ್ಷಿಯು ಗುರುತಿಸಿದ ಕಾರಣ ಅವುಗಳನ್ನು ಕ್ರಮವಾಗಿ ನಿಪಿಃ17(ಎ) ಮತ್ತು ನಿಪಿಃ17(ಬಿ) ಎಂದು ಗುರುತಿಸಲಾಯಿತು. ಸದರಿ ದಾಖಲೆಯ 8ನೇ ಪುಟದಲ್ಲಿರುವ 1ನೇ ಪ್ರತಿವಾದಿಯಾದ ಅಣ್ಣಪ್ಪ ಅಡಪ್ಪ ಪಾಟೀಲ ಹಾಗೂ ಮೃತ 2ನೇ ಪ್ರತಿವಾದಿಯಾದ ಗೌಡಪ್ಪ ಅಡಪ್ಪ ಪಾಟೀಲ ರವರ ಸಹಿ ಹಾಗೂ ಹೆಬ್ಬೆಟ್ಟಿನ ಗುರುತನ್ನು ಸಾಕ್ಷಿಯು ಗುರುತಿಸಿದ ಕಾರಣ ಅವುಗಳನ್ನು ಕ್ರಮವಾಗಿ ನಿಪಿಃ17(ಸಿ) ಮತ್ತು ನಿಪಿಃ17(ಡಿ) ಎಂದು ಗುರುತಿಸಲಾಯಿತು. ಸಾಕ್ಷಿಗೆ ನಿಪಿಃ1 ನ್ನು ತೋರಿಸಿದ್ದು, ಅದರಲ್ಲಿರುವ 1ನೇ ಪ್ರತಿವಾದಿ, ಮೃತ 2ನೇ ಪ್ರತಿವಾದಿ, 4ನೇ ಹಾಗೂ 8ನೇ ಪ್ರತಿವಾದಿಯವರ ಸಹಿಗಳನ್ನು ಸಾಕ್ಷಿಯು ನಿರಾಕರಿಸಿರುತ್ತಾರೆ. 2003 ನೇ ಇಸ್ವಿಯಲ್ಲಿ ನಮ್ಮ ಮನೆಯ ಪರಿಸ್ಥಿತಿ ಚೆನ್ನಾಗಿ ಇಲ್ಲದಿರುವ ಕಾರಣ ಸದರಿ 1ನೇ ಪ್ರತಿವಾದಿ, ಮೃತ 2ನೇ ಪ್ರತಿವಾದಿ, 4ನೇ ಹಾಗೂ 8ನೇ ಪ್ರತಿವಾದಿಯವರು ನಿಪಿಃ1 ನ್ನು ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸದರಿ ದಿನದಂದು 1ನೇ ಹಾಗೂ ಮೃತ 2ನೇ ಪ್ರತಿವಾದಿ ನಿಪಿಃ2 ನ್ನು ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. 2018 ನೇ ಇಸ್ವಿಯಲ್ಲಿ

ಅಸಲು ದಾವಾ ಸಂಖ್ಯೆ 603/2020

**ಡಿ.ಡಬ್ಲ್ಯೂ-1**

ಅಸಲು ದಾವಾ ಸಂಖ್ಯೆ 121/2012 ನ್ನು ನಾನು ದಾಖಲಿಸಿರುತ್ತೇನೆ ಎಂದರೆ ಸರಿ. ಈ ದಾವೆಯು ಆರ್.ಎಸ್.ನಂ.121/10 ಗೆ ಸಂಬಂಧಿಸಿ ದಾಖಲಿಸಲಾಗಿರುತ್ತದೆ ಎಂದರೆ ಸರಿ. ಸದರಿ ಅಸಲು ದಾವಾ ಸಂಖ್ಯೆ 121/2012 ರಲ್ಲಿ ನಾನು ಈ ದಾವೆಯ ಆರ್.ಎಸ್.ನಂ.121/10 ನ್ನು ಸೇರಿಸಿರುತ್ತೇನೆ. ಸಾಕ್ಷಿಗೆ ನಿಪಿಃ 17 ನ್ನು ತೋರಿಸಿದ್ದು, ಸಾಕ್ಷಿಯು ಅದರಲ್ಲಿ ಆರ್.ಎಸ್.ನಂ.121/10 ಸ್ವತ್ತು ಇರುವುದಿಲ್ಲ ಎಂದು ನುಡಿಯುತ್ತಾರೆ.

**ಈ ಹಂತದಲ್ಲಿ ಮುಂದುವರೆದ ಸಾಕ್ಷಿಯ ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದು ನೀಡಲಾಯಿತು.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ ಸರಿ ಇದೆ.**

**Sd/-**

**3ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರು,**

**ಬೆಳಗಾವಿ.**